

ಈ ಸಾಂಕ್ರಾಮಿಕದಲ್ಲಿ ಬದುಕು ಹೀಗೇ ಸ್ವಾಮಿ...



ಅಂಗಳದ ಹೆಣ ತಂಗಳಾಗಿದೆ.... ಇನ್ನೂ ಪಾಳಿ ಬಂದಿಲ್ಲ

ಪಾಪದ ಫಲ. ಕಣ್ಣಿದ್ದೂ ಕುರುಡರನ್ನು ದೇವರು ಇಂತಹ ರೋಗದ ಮೂಲಕ ಹೊಸಕಿ ಹಾಕಿದ್ದು, ಚರಿತ್ರೆಯಲ್ಲಿ ದಾಖಲಾಗಿದೆ. ಆತನಿಗೆ ಶರಣಾಗದೆ ಬೇರೆ ವಿಧಿಯಿಲ್ಲ' ಎಂದು ಉಪದೇಶ ನೀಡಿದ್ದರು. ಸೋಂಕಿನಿಂದ ರಕ್ಷಣೆ ಪಡೆಯಲು ಕೊರೊನಮ್ಮನ ದೇವಸ್ಥಾನ ನಿರ್ಮಾಣ ಮಾಡಿದ, ರಾತ್ರಿ ಊರಿನಲ್ಲಿ ಕುದುರೆ ಗಸ್ತು ತಿರುಗಲು ಬಿಟ್ಟ ವಿಡಿಯೊಗಳನ್ನೂ ತೋರಿಸಿದ. ಸಾವಿರಾರು ಗ್ರೂಪ್‌ಗಳಲ್ಲಿ ಈ ವಿಡಿಯೊಗಳು ಹರಿದಾಡುತ್ತಿವೆ ಎಂದು ತಾಹು ಹೇಳಿದ. ಡಾ. ರಿಯೂ ನಕ್ಕು ಉತ್ತರಿಸಿದರು: 'ನನಗೆ ದೇವರ ಮೇಲೆ ನಂಬಿಕೆ ಇಲ್ಲ. ನನ್ನ ನಂಬಿಕೆ ಏನಿದ್ದರೂ ಮನುಷ್ಯತ್ವದ ಮೇಲಷ್ಟೇ'.

ಎರಡನೇ ಅಲೆ ಮೊದಲನೆಯದಕ್ಕಿಂತ ಇನ್ನಷ್ಟು ಮತ್ತಷ್ಟು ಶಕ್ತಿಯನ್ನು ಮೈಗೂಡಿಸಿಕೊಂಡು ಬಲವಾಗಿ ಬೀಸಿತು. ಸಿದ್ಧತೆಗೆ ಸಾಕಷ್ಟು ಕಾಲಾವಕಾಶವಿದ್ದರೂ ಮೈಮರೆತು ಮಲಗಿದ ನಗರದ ಮೇಲೆ ಯುದ್ಧವನ್ನೇ ಸಾರಿತು. ರೋಗಿ ಏದುಸಿರು ಬಿಡುವುದನ್ನು ನೋಡಿ ಆಂಬುಲೆನ್ಸ್‌ಗೆ ಕರೆ ಮಾಡುವಾಗ, ಮನೆಯೊಳಗಿನಿಂದ ಆಂಬುಲೆನ್ಸ್‌ಗೆ ಸಾಗಿಸುವಾಗ, ಮನೆಯಿಂದ ಆಸ್ಪತ್ರೆಗೆ ಕರೆದೊಯ್ಯುವಾಗ, ಬೆಡ್ ಮೇಲೆ ಮಲಗಿಸುವಾಗ, ಮೂಗಿಗೆ ಉಸಿರಾಟದ ಸಾಧನ ಹಾಕುವಾಗ, ಚುಚ್ಚುಮದ್ದು ನೀಡುವಾಗ... ಮನುಷ್ಯ ಪ್ರಯತ್ನಕ್ಕೆ ಯಾವ ಬೆಲೆಯೂ ಇಲ್ಲದಂತೆ ತರಗೆಲೆಗಳ ರೀತಿಯಲ್ಲಿ ಜೀವಗಳು ಉದುರಿ ಬೀಳತೊಡಗಿದವು. ಹಾಗೆಯೇ ದೂರದ ಚಾಮರಾಜನಗರದ ಆಸ್ಪತ್ರೆಯಲ್ಲಿ ಆಮ್ಲಜನಕ ಲಭ್ಯವಿಲ್ಲದೆ 24 ಜೀವಗಳು ಉಸಿರುಬಿಟ್ಟ ಸುದ್ದಿಬಂತು. ಡಾ. ರಿಯೂ ಕುದ್ದುಹೋದರು. ಇದು ವ್ಯವಸ್ಥೆಯೇ ಜನರ ಕತ್ತುಹಿಸುಕಿ ಸಾಯಿಸಿದಂತೆ ಎಂದು ಸಿಟ್ಟಿನಿಂದ ಹೇಳಿದರು. ಅಂಥದೇ ಘಟನೆಗಳು ಬೇರೆ ಭಾಗಗಳಲ್ಲೂ ನಡೆದ ವರದಿಗಳು ಬಂದವು. ಒತ್ತಡ ಹೆಚ್ಚಾದಾಗ ಸರ್ಕಾರ ಹಿರಿಯ ವೈದ್ಯರ ಸಭೆ ಕರೆಯಿತು.

'ಆಕ್ಸಿಜನ್ ಕೊರತೆ ಇದೆ ಎಂದು ಎಷ್ಟು ಹೇಳಿದರೂ ನೀವು ಕ್ರಮ ಕೈಗೊಳ್ಳಲಿಲ್ಲ. ಅನ್ಯಾಯವಾಗಿ ಎಷ್ಟೊಂದು ಜೀವಗಳು ಬಲಿಯಾದವು' ಎಂದು ಡಾ. ರಿಯೂ ಸಭೆಯಲ್ಲಿ ಸಿಡುಕಿನಿಂದಲೇ ಹೇಳಿದರು.

'ಜನರ ಜೀವ ಉಳಿಸಲು ನಿಮ್ಮಷ್ಟೇ ನಾವೂ ದುಡೀತಾ ಇದೀವಿ. ಹಗಲು–ರಾತ್ರಿ ಎನ್ನದೆ ಕೆಲ್ಸ ಮಾಡ್ತಿದೀವಿ. ಕೆಲವೊಮ್ಮೆ ಪರಿಸ್ಥಿತಿ ಕೈ ಮೀರುತ್ತೆ ಏನು ಮಾಡೋದು? ತನಿಖೆಗೆ ಆದೇಶಿಸಿದ್ದೇವಲ್ಲ' ಸಚಿವರು ಮಾರುತ್ತರ ನೀಡಿದರು.

'ಜನ ಸತ್ತಮೇಲೆ ತನಿಖೆ ನಡೆಸಿ ಏನು ಪ್ರಯೋಜನ? ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ.'

'1200 ಟನ್ ಆಕ್ಸಿಜನ್ ನಿತ್ಯ ಪೂರೈಸುವಂತೆ ಕೇಂದ್ರಕ್ಕೆ ಬೇಡಿಕೆ ಸಲ್ಲಿದೀವಿ. ಅವರು ಕೊಡದಿದ್ದರೆ ನಾವೇನು ನೇಣು ಹಾಕ್ಕೊಳ್ಳೋಣವೇ?' (ಈ ವೈದ್ಯನನ್ನು ಸಭೆಗೆ ಕರೆಯಬೇಡಿ ಎಂದು ಹೇಳಿದರೂ ಅಧಿಕಾರಿಗಳು ಕರೆದು ಮೋಜು ನೋಡುತ್ತಾರೆ ಎಂದು ಅವರು ಗೊಣಗಿದ್ದು, ಪಕ್ಕದಲ್ಲಿ ಕುಳಿತವರಿಗೂ ಕೇಳಿಸಿತು.)

'ನೇಣು ಹಾಕಿಕೊಳ್ಳಿ ಅಂತ ನಾವೇಕೆ ಹೇಳೋಣ. ನಮ್ಮಲ್ಲಿಯೇ ಆಕ್ಸಿಜನ್ ಉತ್ಪಾದನೆ ಶುರುಮಾಡಿ ಎಂದು ಕಳೆದ ಆಗಸ್ಟ್‌ನಲ್ಲೇ ಪ್ರಪೋಸಲ್ ಕೊಟ್ಟಿದ್ದೆವಲ್ಲ, ಅದರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ, ಹೇಳಿ ಸಾಕು.'

'ಹಲವು ಘಟಕಗಳ ನಿರ್ಮಾಣಕ್ಕೆ ಈಗಾಗಲೇ ಅನುಮತಿ ನೀಡಿದ್ದೇವೆ.'

'ಆ ಘಟಕಗಳು ಆಕ್ಸಿಜನ್ ಉತ್ಪಾದನೆ ಮಾಡುವವರೆಗೆ ಜನ ಸಾಯುತ್ತಲೇ ಇರಬೇಕೇ?'

'ವಿರೋಧಪಕ್ಷದ ನಾಯಕರಂತೆ ಮಾತನಾಡಬೇಡಿ.'

ಮಾತು ಬಿರುಸುಗೊಳ್ಳುತ್ತಿರುವುದನ್ನು ಅರಿತ ಹಿರಿಯ ಸಚಿವರು ಮಧ್ಯೆ ಪ್ರವೇಶಿಸಿದರು. 'ಕೇಂದ್ರ ಸರ್ಕಾರದವ್ರು ಆಕ್ಸಿಜನ್ ಕೊಡೋಕೆ ಒಪ್ಪಿದ್ದಾರೆ. ಅವರ ಮೇಲೆ ಕೋರ್ಟ್ ಆದೇಶಪಾಲನೆಯ ಒತ್ತಡ ಬೇರೆ ಇದೆ. ಆಕ್ಸಿಜನ್ ಬಂದೇ ಬರುತ್ತೆ' ಎಂದು ಹೇಳಿದರು.

ಇನ್ನೊಬ್ಬ ವೈದ್ಯರು ವ್ಯಾಕ್ಸಿನ್ ವಿಚಾರ ಎತ್ತಿದರು. 'ವ್ಯಾಕ್ಸಿನ್‌ಗಾಗಿ ಆಸ್ಪತ್ರೆ ಮುಂದೆ ಎಂದಿಗೂ ಮುಗಿಯದ ಸರದಿಗಳು ಭಯ ಹುಟ್ಟಿಸುತ್ತವೆ. ನೀವು ದಿನಕ್ಕೊಂದು ಹೇಳಿಕೆ ನೀಡಿ ಜನರಲ್ಲಿ ಗೊಂದಲ ಮೂಡಿಸುತ್ತೀರಿ' ಎಂದು ಆಕ್ಷೇಪಿಸಿದರು. 'ವ್ಯಾಕ್ಸಿನ್ ಸಿಕ್ಕರೆ ಸೋಂಕು ನಿಯಂತ್ರಣಕ್ಕೆ ಬರುತ್ತದೆ' ಎಂದೂ ಹೇಳಿದರು. 'ವ್ಯಾಕ್ಸಿನ್ ಪೂರೈಕೆಗೆ ಜಾಗತಿಕ ಟೆಂಡರ್ ಕರೆಯಲಾಗಿದೆಯಲ್ಲ' ಎಂದು ಮತ್ತೊಬ್ಬ ಸಚಿವರು ಉತ್ತರ ಕೊಟ್ಟರು. ಬೆಡ್ ಬ್ಲಾಕಿಂಗ್, ರೆಮ್‌ಡಿಸಿವರ್‌ನ ಮಾರಾಟದ ಕಾಳದಂಧೆ ವಿಷಯಗಳು ಚರ್ಚೆಗೆ ಬಂದರೂ 'ಕ್ರಮ ಜರುಗಿಸಲಾಗುವುದು' ಎಂಬ ಸಮಾಧಾನ